**ಕರ್ನಾಟಕ ಸರ್ಕಾರ**
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**
**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21** **ದಿನಾಂಕ : 13–11–2020**

# ಮಾಧ್ಯಮ ಆಮಂತ್ರಣ

**67ನೇ ಅಖಿಲ ಭಾರತ ಸಹಕಾರ ಸಪ್ತಾಹ 2020**

**ಕಾರ್ಯಕ್ರಮ ಉದ್ಘಾಟನೆ ಮತ್ತು "ಸಹಕಾರ ರತ್ನ" ಪ್ರಶಸ್ತಿ ಪ್ರದಾನ:**
**ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ**

**ಸಹಕಾರ ಧ್ವಜಾರೋಹಣ : ಎಸ್. ಟಿ. ಸೋಮಶೇಖರ್,**
**ಸಹಕಾರ ಸಚಿವರು, ಕರ್ನಾಟಕ ಸರ್ಕಾರ**

**ದಿನಾಂಕ : 14–11–2020, ಶನಿವಾರ, ಸಮಯ : ಬೆಳಿಗ್ಗೆ 10–00 ಗಂಟೆಗೆ**
**ಸ್ಥಳ : ಬ್ಯಾಂಕ್ವೆಟ್ ಹಾಲ್, ವಿಧಾನ ಸೌಧ, ಬೆಂಗಳೂರು.**

# ಪತ್ರಿಕಾ ಪ್ರಕಟಣೆ

## ಮಾದರಿ ಪಾರಂಪರಿಕ ಗ್ರಾಮ ಉದ್ಘಾಟನೆ

ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ): ನಮ್ಮ ಹಿಂದಿನ ಗ್ರಾಮೀಣ ಸಂಸ್ಕೃತಿ ಮತ್ತು ಸ್ವಾವಲಂಬನೆಯ ಬದುಕನ್ನು ನಾವೂ ಎಂದಿಗೂ ಮರೆಯಬಾರದು. ಈಗಿನ ಒತ್ತಡದ ಮನೋಭವವುಳ್ಳ ಬದುಕಿನಲ್ಲಿರುವ ಜನತೆಗೆ ಮತ್ತು ಮಕ್ಕಳಿಗೆ ನಮ್ಮ ಹಿಂದಿನ ಪರಂಪರೆಯನ್ನು ನೆನಪಿಸುವ ಉದ್ದೇಶದಿಂದ ಈ ಮಾದರಿ ಪಾರಂಪರಿಕ ಗ್ರಾಮವನ್ನು ರೂಪಿಸಲಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಿಳಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ನಗರದ ಜಕ್ಕೂರಿನ ಶ್ರೀರಾಮಪುರ ಕ್ರಾಸ್‌ನಲ್ಲಿರುವ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ಆವರಣದಲ್ಲಿ ಅಭಿವೃದ್ಧಿಪಡಿಸಿರುವ ಮಾದರಿ ಪಾರಂಪರಿಕ ಗ್ರಾಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಈ ಮಾದರಿ ಪಾರಂಪರಿಕ ಗ್ರಾಮ ನಮಗೆ ನಮ್ಮ ಹಿಂದಿನ ಗ್ರಾಮೀಣ ಸಂಸ್ಕೃತಿ ಮತ್ತು ಸ್ವಾವಲಂಬಿ ಬದುಕಿನ ಪರಿಚಯನವನ್ನು ಭವಿಷ್ಯದ ಜನಾಂಗಕ್ಕೆ ತೋರಿಸುವ ಒಂದು ವಿಶೇಷ ಯೋಜನೆಯಾಗಿದೆ ಎಂದು ಹೇಳಿದರು.

ಶಿಲ್ಪಾಕಲಾ ಕುಟೀರದ ಖ್ಯಾತ ಕಲಾವಿದ ಡಾ.ಟಿ.ಬಿ.ಸೊಲಬಕ್ಕನವರ ತಂಡ ಕಳೆದ ಮೂರು ವರ್ಷಗಳಿಂದ ಈ ಮಾದರಿ ಗ್ರಾಮವನ್ನು ಅತ್ಯಂತ ಸುಂದರವಾಗಿ ಅರ್ಥಗರ್ಭಿತವಾಗಿ ರೂಪಿಸಿದ್ದಾರೆ ಎಂದು ಕಲಾವಿದರನ್ನು ಶ್ಲಾಘಿಸಿದ ಮುಖ್ಯಮಂತ್ರಿಗಳು ಭವಿಷ್ಯದಲ್ಲಿ ಇದೊಂದು ಪ್ರವಾಸಿತಾಣವನ್ನಾಗಿ ರೂಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವ ಕೆ.ಎಸ್.ಈಶ್ವರಪ್ಪ ಅವರು ಮಾತನಾಡಿ ರಾಜ್ಯದಲ್ಲಿ ಇದೊಂದು ವೈಶಿಷ್ಟಪೂರ್ಣ ಯೋಜನೆಯಾಗಿದ್ದು, ಕರ್ನಾಟಕದ ಪ್ರತಿ ಜಿಲ್ಲೆಯ ವಿಶೇಷಗಳನ್ನು ಮತ್ತು ಅವುಗಳ ಕಲಾವಂತಿಕೆಯನ್ನು ಅಧ್ಭುತವಾಗಿ ಕಲಾಕೃತಿಗಳಲ್ಲಿ ನಿರ್ಮಿಸಲಾಗಿದೆ. ಇನ್ನೂ ಕೆಲವೇ ತಿಂಗಳುಗಳಲ್ಲಿ ಸಾರ್ವಜನಿಕರ ಪ್ರವೇಶಕ್ಕೆ ಸಿದ್ದಗೊಳ್ಳಲಿದೆ, ಶುಲ್ಕದ ಬಗ್ಗೆ ಶೀಘ್ರದಲ್ಲಿ ಸಭೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶಾಸಕ ಕೃಷ್ಣಬೈರೇಗೌಡ ಅವರು ಮಾತನಾಡಿ ಈ ಯೋಜನೆ ಆರಂಭವಾಗಿ 3 ವರ್ಷಗಳಾಗಿದ್ದು, ಹಿಂದಿನ ಸರ್ಕಾರದ ಈ ಯೋಜನೆಗೆ ಆರ್ಥಿಕ ನೆರವು ನೀಡಿ ಪೂರ್ಣಗೊಳಿಸಿದ ಮುಖ್ಯಮಂತ್ರಿಗಳಿಗೆ ಧನ್ಯವಾದಗಳು ಎಂದು ಹೇಳಿದರು.

ಆಧುನಿಕ ಪ್ರಪಂಚ ತನ್ನ ಮೂಲವನ್ನೇ ಮರೆತಿದ್ದು, ಬೆಂಗಳೂರಿನಂತ ಮಹಾನಗರದಲ್ಲಿ ಮಾದರಿ ಗ್ರಾಮೀಣ ಬದುಕಿನ ಈ ಸ್ಥಳ ಪ್ರಖ್ಯಾತ ಪ್ರವಾಸಿತಾಣವಾಗಲಿದೆ. ಪಕ್ಕದಲ್ಲಿರುವ ಕೆರೆಯನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು.

**<u>ಮಾದರಿ ಪಾರಂಪರಿಕ ಗ್ರಾಮ ವಿಶೇಷ:</u>**

ಈ ಪಾರಂಪರಿಕ ಗ್ರಾಮದಲ್ಲಿ ನಾವೂ ವಿಶೇಷವಾಗಿ ನಮ್ಮ ಗ್ರಾಮೀಣ ಕರ್ನಾಟಕದ ಸ್ವಾವಲಂಬಿ ಗ್ರಾಮದಲ್ಲಿರುವ ಅಗಸಿ, ಬಾಗಿಲು, ಅಕ್ಕ-ಪಕ್ಕದಲ್ಲಿ ಕುರಿ-ಆಡುಗಳ ಸಾಕಾಣಿಕೆ, ಮಕ್ಕಳ ಗೋಲಿ ಆಟ, ಬುಡುಬುಡಿಕೆ ಹೇಳುವವ, ಒಕ್ಕಲಿಗರ ಮನೆ, ಹಳ್ಳಿ ವೈದ್ಯೆ, ಕಿರಆಣಿ ಅಂಗಡಿ, ಸಿಂಪಿಗರ ಮನೆ, ಪತ್ತಾರ ಮನೆ, ಬ್ರಾಹ್ಮಣರ ಮನೆ, ಮಂಗಳೂರು ಮನೆ, ಶಾನಭೋಗರ ಮನೆ, ಗೌಡರ ಮನೆ, ಮಾಲಿಗೆ ಮನೆ, ತೋಟ್ಟೇ ಮನೆ, ಗಾಣಿಗೇರ ಮನೆ, ಗ್ರಾಮೀನ ಮನೆಯಲ್ಲಿ ಶಾವಿಗೆ ಮಾಡುವವರ ಮನೆ ಕುರುಬರ ಮನೆ, ಅಗಸರ ,ನೆ, ಶಿಲ್ಪಕಾರರ ಮನೆ, ಆಟಿಕೆ ನಿರ್ಮಾಣಕಾರರ ಮನೆ, ಪಿಂಗಾರ ಮನೆ, ಕಂಬಾರ ಮನೆ

ಬಳೆಗಾರ ಮನೆ, ಕಂಬಾರ ಮನೆ, ಬಡಿಗರ ಮನೆ, ಕೊಡಗು ಮನೆ, ಶಾಲಿ ಗುಡಿ, ಪಂಚಾಯಿತಿ ಕಟ್ಟೆ, ನೀರು ಸೇದುವ ಭಾವಿ ದೃಶ್ಯ, ಮೀನುಗಾರರ ಮನೆ, ಸುಣಗಾರ ಬಟ್ಟೆ ನಿರ್ಮಾಣ, ಚಮ್ಮಾರ ಮನೆ, ಲಂಭಾಣಿ ಮನೆ, ಚಕ್ಕಡಿ ಬಂಡಿ, ಗ್ರಾಮೀಣ ಮಕ್ಕಳ ಕ್ರೀಡೆಗಳನ್ನು ನೋಡಬಹುದು. ಹಾಗೆಯೇ ನಮ್ಮ ಸಾಂಪ್ರದಾಯಿಕ ಬೇಸಾಯ ಪದ್ಧತಿಯಲ್ಲಿರುವ ರಂಟೆ, ಕುಂಟೆ, ಉಳುಮೆ, ಬಿತ್ತುವ ಸನ್ನಿವೇಶಗಳನ್ನು ಇಲ್ಲಿ ಕಾಣಬಹುದು. ಅದೇ ರೀತಿ ದನಗಳ ಸಂತೆ, ರೈತರ ಸಂತೆ, ದೇಸಿಮಕುಸ್ತಿ ಕಣ, ಕಪಲಿ ಬಾವಿ, ಕಣ, ತೂರವ ಸನ್ನಿವೇಶಗಳು ಇಲ್ಲಿ ಕಾಣಬಹುದು.

ನಮ್ಮ ಕರ್ನಾಟಕದ ಬೇರೆ ಬೇರೆ ಪ್ರಾಂತ್ಯದ ಜಾನಪದ ಪ್ರಕಾರಗಳ ಮತ್ತು ಜನಪದ ಮೇಳಗಳ ಮಾದರಿ ಶಿಲ್ಪಕಲಾಕೃತಿಗಳು (ದೊಡ್ಡಾಟ, ಯಕ್ಷಗಾನ, ಮೂಡಲಪಾಯ ಬಯಲಾಟ, ಹುಲಿವೇಷ, ಜಗ್ಗಲಿಗೆ, ಕರಡಿ, ಮಜಲು ವೀರಗಾಸೆ, ರಣ ಹಲಗಿ, ಬುರ್ರಕಥಾ, ನಗಾರಿ, ಗೊಂದಲಿಗರು, ಕಿನ್ನರಿ ಜಫಗಿ, ಕರಗ,ಮ ಪೂಜಾ ಕುಣಿತ, ಸೋಮನ ಕುಣಿತ, ನಂದಿಕೋಲು ಕುಣಿತ, ಜೋಗತಿ–ಚೌಡಕಿ, ಕಂಸಾಳೆ, ಗೊರವರ–ಕರಡಿ, ಗೊರವರ ಕುಣಿತ, ಉತ್ತರಿ, ಆಟಿಕಳಂಜ, ಕೀಲು ಕುದುರೆ ಕುಣಿತ, ಕುಡುಬಿಯರ ಕುಣಿತ, ಕೊರಗೆ ಡೋಲು ಕುಣಿತ, ಸಿದ್ದಿಯರ ಮಗಡಿ ಕುಣಿತ, ಹಾಲಕ್ಕಿ ಒಕ್ಕಲಿಗೆರ ಗಮಟೆ ಪಾಂಗ , ಗೌಳಿಗರ ಕುಣಿತ, ಕಾಡು ಗೊಲ್ಲರ ಗಣೇಪದ ಲಂಬಾಣಿಯರ ಕುಣಿತ, ಬಹುರೂಪಿ–ವೇಷಗಾರರು, ಪಾರಿಜಾರ, ಸೂತ್ರದ ಗೊಂಬೆಯಾಟ, ಮಾಂಕಾಳಿ ಕುಣಿತ, ಕಾವಡಿ ಕುಣಿತ, ಗೊಮಡರ ಮಂಡರ, ಭೂತರಧನೆ, ಪಾಳೆಗಾರ ವೇಷ, ಸುಡುಗಾಡು ಸಿದ್ಧ, ಮಳೆರಾಯನ ಪೂಜೆ–ಉರ್ಜಿ, ಕೊಂಡಾ ಮಾಮಾ (ಕುರಕುರ ಮಾಮಾ), ಗಾರುಡಿ ಗೊಂಬೆ ಕುಣಿತ)

ಕರ್ನಾಟಕ ಗ್ರಾಮೀನ ಕ್ರೀಡೆಗಳ ಮಾದರಿ ಶಿಲ್ಪಕಾಕೃತಿಗಳು (ಬುಗುರು ಆಟ, ಚಮೆ, ಲಿಂಬು ಆಟ, ಬಳಿ ಚುಕ್ಕ ಆಟ, ಎಡೆ ಮಟ್ಟೆ ಆಟ, ಕಣ್ಣಾ ಮುಚ್ಚಾಲೆ ಆಟ, ಕಪ್ಪೆ ಜಿಗತ ಆಟ, ಗುಬ್ಬು ಮನೆ ಆಟ, ಮೂರು ಕಾಲಿನ ಓಟದಾಟ, ಹಗ್ಗ ಜಿಗಿಯುವ ಆಟ, ಚೋರಿ–ಚೋರರ ಆಟ, ನಂದಿ ಕೋಲು ಆಟ, ಜಕ್–ಬುಕ್ ಆಟ, ಕುಂಟಾ ಬಿಲ್ಲೆ ಆಟ, ಗಡಿಗೆ ಒಡೆಯುವಾ, ಮುಷ್ಠಿ ಬಗ್ಗಿಸುವ ಆಟ, ಜಡೆಯ ಲಿಮಗದ ಆಟ) ಹೀಗೆ ಇನ್ನೂ ಹಲು ಸನ್ನಿವೇಶಗಲು ಮತ್ತು ಕಲಾತ್ನಮ ಶೈಲಿಯಲ್ಲಿರುವ ಉಪಹಾರ ಗೃಹ ಇರುವುದು.

ಮಾದರಿ ಪಾರಂಪರಿಕ ಗ್ರಾಮವನ್ನು ಅಂದಾಜು ರೂ 11.68 ಕೋಟಿಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ.

## ಕಲೆ ಮತ್ತು ಕಲ್ಪನೆಯ ಕಲಾವಿದ ಡಾ: ಟಿ.ಬಿ. ಸೊಲಬಕ್ಕನವರ ಕಿರು ಪರಿಚಯ

ಸೇವೆ : * 3 ವರ್ಷಗಳ ಚಲನಚಿತ್ರಗಳಲ್ಲಿ ಸಹಾಯಕ ಕಲಾ ನಿರ್ದೇಶಕರಾಗಿ ಕೆಲಸ.

- ಪ್ರಧಾನ ಪುಟ ವಿನ್ಯಾಸಕ : ಜ್ಞಾನ ಗಂಗೋತ್ರಿ ಪತ್ರಿಕೆ.
- ಪ್ರಜಾಮತದಲ್ಲಿ ಕಲಾವಿದ
- 1972 ರಿಂದ 1990 ರ ವರೆಗೆ ದಾವಣಗೆರೆ ಕಲಾ ಕಾಲೇಜಿನಲ್ಲಿ ಲೆಕ್ಚರರ್ ಆಗಿ ಸೇವೆ.

ಪ್ರಶಸ್ತಿಗಳು :* ಜಾನಪದ, ಜ್ಞಾನ–ವಿಜ್ಞಾನ ಪ್ರಶಸ್ತಿ (2001)

- ಸಂಘಟನಾ ಪ್ರಶಸ್ತಿ (2002)
- ರಾಜ್ಯೋತ್ಸವ ಪ್ರಶಸ್ತಿ (2005)
- ಲಲಿತಕಲಾ ಅಕಾಡಮಿ ಗೌರವ ಪ್ರಶಸ್ತಿ (2006)
- ಅಧ್ಯಕ್ಷರು, ಕರ್ನಾಟಕ ಬಯಲಾಟ (ದೊಡ್ಡಾಟ) ಅಕ್ಯಾಡಮಿ 2019
- ಗೌರವ ಡಾಕ್ಟರೇಡ್ ಪ್ರಶಸ್ತಿ 2018

ಎಂಟು ವಿಶ್ವದಾಖಲೆಗಳಲಲು ಸೇರ್ಪಡೆಯಾದ ಉತ್ಸವ ರಾಕ್ ಗಾರ್ಡನ್, ಗೊಟಗೋಡಿ.

1. ಲಿಮ್ಕಾ ಬುಕ್ ಆಫ್ ರಿಕಾರ್ಡ್ಸ
2. . ಇಂಡಿಯಾ ಬುಕ್ ಆಫ್ ರಿಕಾರ್ಡ್ಸ
3. ರಿಕಾರ್ಡ್ಸ ಸೆಕ್ಟರ್ (ಅಮೇರಿಕಾ)
4. ರಿಕಾರ್ಡ್ಸ ಹೋಲ್ಡರ್ಸ್ ರಿಪಬ್ಲಿಕ್ (ಲಂಡನ್)
5. ಯುನಿಕ್ ವಲ್ಡ್ ರಿಕಾರ್ಡ್ಸ
6. ಅಮೇಜಿಂಗ್ ವಲ್ಡ್ ರಿಕಾರ್ಡ್ಸ
7. ಅಸಿಸ್ಟ್ ವಲ್ಡ್ ರಿಕಾರ್ಡ್ಸ
8. ಎವರೆಸ್ಟ್ ವಲ್ಡ್ ರಿಕಾರ್ಡ್ಸ (ನೇಪಾಳ)

## ಸರ್ಕಾರಿ ಭರವಸೆಗಳ ಸಮಿತಿ ಸಭೆಗೆ ಸದಸ್ಯರುಗಳು ಕಡ್ಡಾಯವಾಗಿ ಹಾಜರಾಗಿ : ರಘುಪತಿ ಭಟ್

**ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ): ಅಧಿವೇಶನದ ಅವಧಿಯಲ್ಲಿ ಸಚಿವರುಗಳು ನೀಡಿದ ಭರವಸೆಗಳನ್ನು ಕೂಲಂಕುಷವಾಗಿ ಚರ್ಚಿಸಿ, ಅವುಗಳನ್ನು ಕಾರ್ಯರೂಪಕ್ಕೆ ತರುವುದು ಸಮಿತಿಯ ಮೂಲ ಉದ್ದೇಶವಾಗಿರುವುದರಿಂದ ಸದಸ್ಯರೆಲ್ಲರೂ ಸಭೆಗೆ ಕಡ್ಡಾಯವಾಗಿ ಹಾಜರಾಗಿ ಸಲಹೆಗಳನ್ನು ನೀಡಬೇಕೆಂದು ಸರ್ಕಾರಿ ಭರವಸೆ ಸಮಿತಿಯ ಅಧ್ಯಕ್ಷರಾದ ರಘುಪತಿ ಭಟ್ ತಿಳಿಸಿದರು.**

**ಅವರು ಇಂದು ಕರ್ನಾಟಕ ವಿದಾನ ಸಭೆಯ 2020–21ನೇ ಸಾಲಿನ ಸರ್ಕಾರಿ ಭರವಸೆಗಳ ಸಮಿತಿಯ ಪ್ರಾರಂಭಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಭರವಸೆಗಳನ್ನು ಒಂದು ಕಾಲಮಿತಿಯಲ್ಲಿ ಈಡೇರಿಸಿದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ.**

**15ನೇ ವಿಧಾನ ಸಭೆಯ 2018–19ನೇ ಸಾಲಿನಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟಂತೆ ಒಟ್ಟು ಐದು ವರದಿಗಳನ್ನು ಸದನದಲ್ಲಿ ಮಂಡಿಸಲಾಗಿದ್ದು, ಒಂದು ಬಾರಿ**

ಪರಿವೀಕ್ಷಣೆ ಮಾಡಲಾಗಿದೆ. 2019–20ನೇ ಸಾಲಿನಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟಂತೆ ಎರಡು ವರದಿಗಳನ್ನು ಸದನದಲ್ಲಿ ಮಂಡಿಸಲಾಗಿದೆ ಎಂದರು.

ಸಭೆಯಲ್ಲಿ ವಿಧಾನ ಸಭೆಯ ಸದಸ್ಯರು ಹಾಗೂ ಸಮಿತಿಯ ಸದಸ್ಯರಾದ ಡಾ: ಕೆ.ಶ್ರೀನಿವಾಸಮೂರ್ತಿ, ಉದಯ ಬಿ. ಗರುಡಾಚಾರ್, ಎಸ್. ರಾಮಪ್ಪ, ಹರೀಶ್ ಪೂಂಜ, ಸಂಜೀವ ಮಠಂದೂರು ಹಾಗೂ ವಿಧಾನ ಸಭೆ ಸಚಿವಾಲಯದ ಅಧೀನ ಕಾರ್ಯದರ್ಶಿ ಸುಬ್ರಮಣ್ಯ ಎನ್ ಕುಮಟ ಉಪಸ್ಥಿತರಿದ್ದರು. ಉಪಕಾರ್ಯದರ್ಶಿ ಶ್ರೀಮತಿ ಎಂ. ವಿದ್ಯಾಶ್ರೀ ಸ್ವಾಗತಿಸಿದರು.

## ನಗರಾಭಿವೃದ್ಧಿ ಸಚಿವರ ಪ್ರವಾಸ

ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ): ನಗರಾಭಿವೃದ್ಧಿ ಸಚಿವ ಬಿ.ಎ. ಬಸವರಾಜ ಅವರು ನವೆಂಬರ್ 16 ರಂದು ದಾವಣಗೆರೆ ಜಿಲ್ಲಾ ಪ್ರವಾಸ ಕೈಗೊಂಡು ಅದೇ ದಿನ ಕೇಂದ್ರ ಸ್ಥಾನಕ್ಕೆ ವಾಪಸ್ಸಾಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಆಹಾರ ಮತ್ತು ನಾಗರಿಕ ಸರಬರಾಜು ಸಚಿವರ ಪ್ರವಾಸ

ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ): ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಕೆ. ಗೋಪಾಲಯ್ಯ ಅವರು ನವೆಂಬರ್ 16 ರಂದು ಹಾಸನ ಜಿಲ್ಲಾ ಪ್ರವಾಸ ಕೈಗೊಂಡು ಅದೇ ದಿನ ಕೇಂದ್ರ ಸ್ಥಾನಕ್ಕೆ ವಾಪಸ್ಸಾಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಉಪ ಕಾರ್ಮಿಕ ಆಯುಕ್ತ ಕಚೇರಿ ಸ್ಥಳಾಂತರ

ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ): ಕಾರ್ಮಿಕ ಇಲಾಖೆ ಕಛೇರಿಗಳನ್ನು ವಿಕೇಂದ್ರೀಕರಣಗೊಳಿಸಿ, ಕಾರ್ಮಿಕರಿಗೆ–ಉದ್ದಿಮೆದಾರರಿಗೆ, ಸಾರ್ವಜನಿಕರಿಗೆ ಇರುವ ಸ್ಥಳದಲ್ಲಿಯೇ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಉಪಕಾರ್ಮಿಕ ಆಯುಕ್ತರ ಕಚೇರಿ, ಪ್ರಾದೇಶಿಕ–1, ಬೆಂಗಳೂರು. ಸಹಾಯಕ ಕಾರ್ಮಿಕ ಆಯುಕ್ತರ ಕಚೇರಿ, ವಿಭಾಗ–1 ಮತ್ತು 2 ಬೆಂಗಳೂರು, ಕಾರ್ಮಿಕ ಅಧಿಕಾರಿಯವರ ಕಛೇರಿ,

ಉಪವಿಭಾಗ–12 ಮತ್ತು 5 ಹಾಗೂ ಅವರ ಕಾರ್ಯವ್ಯಾಪ್ತಿಯ ಅಧಿನದಲ್ಲಿ ಬರುವ ಹಿರಿಯ ಕಾರ್ಮಿಕ ನಿರೀಕ್ಷಕರ ಕಛೇರಿಗಳನ್ನು ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ ಈ ಕಟ್ಟಡದಿಂದ ಕರ್ನಾಟಕ ಕಾರ್ಮಿಕರ ಅಧ್ಯಯನ ಸಂಸ್ಥೆ, ಮಂಜುನಾಥನಗರ, ಬಗಲಗುಂಟೆ, ಬೆಂಗಳೂರು–560073 ಈ ಕಟ್ಟಡಕ್ಕೆ ಕೂಡಲೇ ಸ್ಥಳಾಂತರಿಸಲಾಗುತ್ತಿದೆ.

ಇನ್ನು ಮುಂದೆ ಸಾರ್ವಜನಿಕರು, ಕಾರ್ಮಿಕರು, ಉದ್ದಿಮೆದಾರರು ಮತ್ತು ಸಂಬಂಧಪಟ್ಟ ಎಲ್ಲಾ ಭಾಗೀದಾರರು ಮೇಲ್ಕಂಡ ವಿಳಾಸದಲ್ಲಿಯೇ ಕಛೇರಿ ಕೆಲಸಗಳಿಗಾಗಿ ಸಂಪರ್ಕಿಸಬಹುದು ಎಂದು ಉಪ ಕಾರ್ಮಿಕ ಆಯುಕ್ತ ಎ.ಎಚ್. ಉಮೇಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಐ.ಎಂ.ಎ. ವಂಚನೆಯ ಪ್ರಕರಣ –ಕ್ಲೇಮಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ

ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ) :

ಐ.ಎಂ.ಎ. ವಂಚನೆ ಪ್ರಕರಣಕ್ಕೆ ಒಳಗಾಗಿರುವ ಠೇವಣಿದಾರರಿಂದ ಕ್ಲೇಮುಗಾಗಿ ಅನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲು ಕ್ರಮವಹಿಸಲಾಗಿದೆ ಎಂದು ಐ.ಎಂ.ಎ. ಪ್ರಕರಣಗಳ ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ ಹರ್ಷಗುಪ್ತ ಅವರು  ತಿಳಿಸಿದರು.

ಇಂದು ವಾರ್ತಾಸೌಧದ ನೆಲ ಮಹಡಿಯಲ್ಲಿರುವ ಸಭಾಂಗಣ ಮಾಧ್ಯಮ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು ಕ್ಷೇಮು ಅರ್ಜಿಗಳನ್ನು ಸ್ವೀಕರಿಸಲು ಪ್ರತ್ಯೇಕ ತಂತ್ರಾಂಶ (ಸಾಪ್ಟ್‌ವೇರ್) ಸಿದ್ದಪಡಿಸಲಾಗಿದೆ. ಠೇವಣಿದಾರರು ಕ್ಲೇಮು ಅರ್ಜಿಗಳನ್ನು ಸಲ್ಲಿಸಲು, ಸ್ವೀಕೃತಿ ದಿನಾಂಕ: 25–11–2020ರಿಂದ ಪ್ರಾರಂಭವಾಗಲಿದೆ. ಅರ್ಜಿ ಸ್ವೀಕೃತಿಯ ಪ್ರಾರಂಭಿಕ ದಿನಾಂಕದಿಂದ ಒಂದು ತಿಂಗಳಿನ ವರೆಗೆ ಅರ್ಜಿಗಳನ್ನು ಸಲ್ಲಿಸಲು ಕಾಲಾವಕಾಶವಿದೆ. ಅಂದರೆ ದಿನಾಂಕ: 24–12–2020ರ ವರೆಗೆ ಠೇವಣಿದಾರರು ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ತದ ನಂತರ ಬರುವು ಯಾವುದೇ ಕ್ಲೇಮು ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ತಿಳಿಸಿದರು.

ಐ.ಎಂ.ಎ. ಠೇವಣಿದರರು ಯಾವುದೇ ಬೆಂಗಳೂರು – 1 / ಕರ್ನಾಟಕ – 1 / ಅಟಲ್‌ಜೀ ಜನಸ್ನೇಹಿ ಕೇಂದ್ರದಲ್ಲಿರುವ ಆಪರೇಟರ್‌ಗಳ ಸಹಾಯವನ್ನು ಪಡೆದು ಆನ್‌ಲೈಲೆ ಮುಖಾಂತರ ಕ್ಲೇಮು ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ಅಥವಾ ಎಲ್ಲಿಯಾದರೂ ತಮ್ಮದೇ ಆದ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸಬಹುದು. ಅನ್‌ಲೈನ್ ಕ್ಲೇಮು ಅರ್ಜಿಗಳನ್ನು ಎರಡು ಹಂತಗಳಲ್ಲಿ ಸಲ್ಲಿಸಬಹುದು. 1ನೇ ಹಂತದಲ್ಲಿ ಅರ್ಜಿದಾರರು ತಮ್ಮ ವೈಯಕ್ತಿಕ ವಿವರಗಳಾದ ಮೊಬೈಲ್ ಸಂಖ್ಯೆ, ಬ್ಯಾಂಕ್ ಖಾತೆ ಸಂಖ್ಯೆ ಮುಂತಾದುವುಗಳನ್ನು ಸಲ್ಲಿಸಬೇಕಾಗಿರುತ್ತದೆ. 2ನೇ ಹಂತದಲ್ಲಿ ಐ.ಎಂ.ಎ. ಸಂಬಂಧಿಸಿದ ಯೋಜನಾವಾರು ಹೂಡಿಕೆ ವಿವರಗಳನ್ನು ಸಲ್ಲಿಸಬೇಕಾಗಿರುತ್ತೆ.

ಠೇವಣಿದಾರರು ಆನ್‌ಲೈನ್ ಅರ್ಜಿಗಳನ್ನು ಆಧಾರ್ ಮೂಲಕ ಅಥವಾ ತನ್ನ ಬ್ಯಾಂಕ್ ಖಾತೆಯ ಸಕ್ಷಮ ಪ್ರಾಧಿಕಾರದ ಬ್ಯಾಂಕ್ ಖಾತೆ ಸಂ. 6442116442 ಮತ್ತು ಐ.ಎಫ್.ಎಸ್.ಸಿ ಕೋಡ್ **HDFC0001748** ಖಾತೆಗೆ ಮೊದಲು ಒಂದು ರೂಪಾಯಿಯನ್ನು (ರೂ.1/-) ವರ್ಗಾಯಿಸಿದರೆ ಯು.ಟಿ.ಆರ್. ಸಂಖ್ಯೆ ಬರುತ್ತದೆ. ಆನಂತರ ಯು.ಟಿ.ಆರ್ ಸಂಖ್ಯೆ ಮೂಲಕ ಅರ್ಜಿದಾರರು ಅರ್ಜಿಗಳನ್ನು ಸಲ್ಲಿಸಬಹುದು. ಐ.ಎಂ.ಎ ವಹಿವಾಟಿಗೆ ಬಳಸಿದ ಠೇವಣಿದಾರರ ಬ್ಯಾಕ್ ಖಾತೆಯು ಚಾಲನೆಯಲ್ಲಿದ್ದಲ್ಲಿ ಐ.ಎಂ.ಎ ಯೋಜನೆಗಳಿಗೆ ಸಂಬಂಧಿಸಿದ ದಾಖಲೆಗಳಾದ ಬಾಂಡ್ ಪ್ರಮಾಣ ಪತ್ರ, ಷೇರು ಪ್ರಮಾಣ ಪತ್ರ ಇತ್ಯಾದಿಗಳನ್ನು ಸಲ್ಲಿಸಬೇಕಾಗಿರುವುದಿಲ್ಲ. ಠೇವಣಿದಾರರು ಸಲ್ಲಿಸಿದ ಹೂಡಿಕೆ ವಿವರಗಳು ಐ.ಎಂ.ಎ ನಿರ್ವಹಿಸುತ್ತಿದ್ದ ದತ್ತಾಂಶದೊಂದಿಗೆ ಹೊಂದಾಣಿಕೆಯಾದಲ್ಲಿ ಠೇವಣಿದಾರರು ಯಾವುದೇ ಹೂಡಿಕೆ ರಸೀದಿಗಳನ್ನು ಸಲ್ಲಿಸಬೇಕಾಗಿರುವುದಿಲ್ಲ. ದತ್ತಾಂಶದಲ್ಲಿ ಹೊಂದಾಣಿಕೆ ಆಗದಿದ್ದಲ್ಲಿ ಮಾತ್ರ ಹೂಡಿಕೆ ರಸೀದಿಗಳನ್ನು ಸಲ್ಲಿಸಬೇಕಾಗಿರುತ್ತದೆ ಎಂದು ಐ.ಎಂ.ಎ. ಪ್ರಕರಣಗಳ ವಿಶೇಷಾಧಿಕಾರಿ ತಿಳಿಸಿದರು.

ಠೇವಣಿದಾರರು ಅನ್‌ಲೈನ್‌ನಲ್ಲಿ ಕ್ಲೇಮು ಅರ್ಜಿಗಳನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ್ದಲ್ಲಿ, ಸಂಬಂಧಿಸಿದ ಕಾರ್ಯವ್ಯಾಪ್ತಿಯ ತಹಸೀಲ್ದಾರ್‌ರವರಿಂದ ಕ್ಲೇಮು ಅರ್ಜಿಸ್ವೀಕರಿಸುವ ಕೊನೆಯ ದಿನಾಂಕದಿಂದ 60 ದಿನಗಳ ಒಳಗಾಗಿ ಅಂದರೆ ದಿನಾಂಕ: 24-02-2021ರ ಒಳಗಾಗಿ ಇ-ದೃಢೀಕರಿಸುವುದು ಅಗತ್ಯವಿರುತ್ತದೆ. ಅನ್‌ಲೈನ್ ಅರ್ಜಿಗಳನ್ನು ಆಧಾರ್ ಅವಲಂಬಿತ ಓಟಿಪಿ ಮೂಲಕ ಅಥವಾ ಐ.ಎಂ.ಎ ವಹಿವಾಟಿಗೆ ಬಳಸಿದ ಬ್ಯಾಂಕ್‌ಖಾತೆ ಹೊರತುಪಡಿಸಿದ ಬ್ಯಾಂಕ್ ಖಾತೆಯಿಂದ ಸಕ್ಷಮ ಪ್ರಾಧಿಕಾರದ ಬ್ಯಾಂಕ್ ಖಾತೆಗೆ ರೂ. 1/- ವರ್ಗಾಹಿಸಿದ ಯು.ಟಿ.ಆರ್.ಸಂಖ್ಯೆ ಮೂಲಕ ಅರ್ಜಿದಾರರುಕ್ಲೇಮು ಅರ್ಜಿಗಳನ್ನು ಸಲ್ಲಿಸಬಹುದು ಆದರೆ ಇತಹಹವರು ಕ್ಲೇಮು ಮೊತ್ತ ಸ್ವೀಕರಿಸುವ ಪೂರ್ವದಲ್ಲಿ ಹೆಚ್ಚಿನ ದೃಢೀಕರಣ ಪ್ರಕ್ರಿಯೆಗೆ ಒಳಪಡುವ ಅಗತ್ಯತೆ ಇದ್ದು, ಆಧಾರ್ ಬಯೋಮೆಟ್ರಿಕ್ ಮೂಲಕ ಅಥವಾ ರೂ. 1/- ನ್ನು ಐ.ಎಂ.ಎ ವಹಿವಾಟಿಗೆ ಬಳಸಿದ ಬ್ಯಾಂಕ್ ಖಾತೆಯಿಂದ ಸಕ್ಷಮ ಪ್ರಧಿಕಾರದ ಬ್ಯಾಂಕ್ ಖಾತೆಗೆ ನಿಗಧಿಪಡಿಸಿದ ಕೊನೆಯ ದಿನಾಂಕದಿಂದ 60 ದಿನದೊಳಗಾಗಿ ಅಂದರೆ 24 ಫೆಬ್ರವರಿ 2021ರ ಒಳಗಾಗಿ ವಗಾಯಿಸುವುದು. 60 ದಿನಗಳ ಅವಧಿಯ ನಂತರ , ಅಂತಹ ಅರ್ಜಿದಾರರು ಯಾವುದಾದರೂಗುರುತಿನ ದಾಖಲೆ ಗಳು ಅಂದರೆ ಚುನಾವಣೆ ಗುರುತಿನ ಚೀಟಿ, ಚಾಲನಾ ಪರವಾನಿಗೆ, ಪಾಸ್‌ಪೋರ್ಟ್ ಇತ್ಯಾದಿ ದಾಖಲೆಗಳೊಂದಿಗೆ ಪ್ರಾಧಿಕಾರದ ಕಚೇರಿಗೆ ಭೌತಿಕವಾಗಿ ಹಾಜರಾಗಿ ದೃಢೀಕರಿಸಿಕೊಳ್ಳಲು ಅವಕಾಶವಿರುತ್ತದೆ.

ಸ್ವೀಕರಿಸಿದ ಮಾಹಿತಿಗಳಾದ ಮೊಬೈಲ್ ಸಂಖ್ಯೆ, ಬ್ಯಾಂಕ್ ಖಾತೆ ಸಂಖ್ಯೆ, ಆಧಾರ್ ಸಂಖ್ಯೆ, ಪಾನ್ ಸಂಖ್ಯೆ, ಕ್ಲೈಂಟ್ ಐ ಹೂಡಿಕೆ ವಿವರಗಳನ್ನು ಸಂಬಂದಿಸಿದ ದತ್ತಾಂಶಗಳೊಮದಿಗೆ ನೈಜ ಸಮಯದಲ್ಲಿ ದೃಢೀಕರಣ ಮಾಡಲಾಗುವುದು. ಹೆಸರು ಮತ್ತು ಭಾವಚಿತ್ರ ಹೊಂದಾಣಿಕೆಯನ್ನು ತಂತ್ರಾಂಶದ ಮೂಲಕ ಪರಿಶೀಲಿಸಲಾಗುವುದು. ಹೆಸರನ್ನು ಐ.ಎಂ.ಎ ದಾಖಲೆಗಳು, ಆಧಾರ್, ಬ್ಯಾಂಕ್ ಹಣ ಸಂದಾಯದ ದತ್ತಾಂಶದೊಂದಿಗೆ ಹೊಂದಾಣಿಕೆ ಮಾಡಲಾಗುವುದು. ಭಾವಚಿತ್ರವನ್ನು ಐ.ಎಂ.ಎ ದಾಖಲೆಗಳು, ಆಧಾರ್ ಮತ್ತು ಲೈವ್ ಭಾವಚಿತ್ರದೊಂದಿಗೆ ಹೊಂದಾಣಿಕೆ ಮಾಡಲಾಗುವುದು. ಠೇವಣಿದಾರರು ಮರಣ ಹೊಂದಿದ್ದಲ್ಲಿ ಅಥವಾ ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ಹೂಡಿಕೆದಾರರ ನಾಮ ನಿರ್ದೇಶಕರು ಅತವಾ ಕಾನೂನು ಬದ್ಧ ಉತ್ತರಾಧಿಕಾರಿಗಳು ಸಂಬಂಧಿಸಿದ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು.

ಹೂಡಿಕೆದಾರರಿಗೆ ಕ್ಲೇಮು ಅರ್ಜಿ ಸಲ್ಲಿಕೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಅರ್ಜಿ ಸಲ್ಲಿಕೆ ದಿನಾಂಕದ ಮುಂಚಿತವಾಗಿ ಮಾಹಿತಿಯನ್ನು ನೀಡಿ ಅರ್ಜಿ ಸಲ್ಲಿಕೆಗೆ ಮಾರ್ಗದರ್ಶನ ನೀಡಲಾಗಿದೆ. ಇದಲ್ಲದೆ ಈ ಬಗ್ಗೆ ಮಾಧ್ಯಮದ ಮುಖಂತರ, ಪತ್ರಿಕಾ ಪ್ರಕಟಣೆ, ಎಸ್.ಎಂ.ಎಸ್ ಸಂದೇಶ ರವಾನಿಸುವ ಮೂಲಕ **Pre-recorded** ಕರೆಗಳ ಮೂಲಕ ಹಾಗೂ ಅಂಚೆ ಮೂಲಕ ಅರ್ಜಿ ಸಲ್ಲಿಕೆ ಬಗ್ಗೆ ಮಾಹಿತಿ ಪ್ರಚುರ ಮಾಡಲಾಗುತ್ತದೆ ಎಂದು ಹರ್ಷಗುಪ್ತ ಅವರು ತಿಳಿಸಿದರು.

ಐ.ಎಂ.ಎ. ಕ್ಲೇಮು ಅರ್ಜಿ ಸಲ್ಲಿಕೆ ಪ್ರಕ್ರಿಯೆ ಕುರಿತು ಹೆಚ್ಚಿನ ಮಾಹಿತಿಗಾಗಿ **imaclaims.karnataka.gov.in** ವೆಬ್‌ಸೈಟ್‌ಗೆ ಭೇಟಿ ನೀಡಿ spocaima20@gmail.com, ಇ–ಮೇಲ್‌ಗೆ ಹಾಗೂ ವಾಟ್ಸ್‌ಅಫ್ ಸಂ. 797556880ಗೆ ಸಂಪರ್ಕಿಸಬಹುದು. ಅಥವಾ ಕಾಲ್ ಸೆಂಟರ್ ಸಂಖ್ಯೆ 080–46885959ಕ್ಕೆ ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಯೊಳಗೆ ಕರೆ ಮಾಡಬಹುದು.

ಕ್ಲೇಮು ಮೊತ್ತವನ್ನು ಮಾನ್ಯ ವಿಶೇಷ ನ್ಯಾಯಾಲಯ, ಬೆಂಗಳೂರು ಇಲ್ಲಿ ಐ.ಎಂ.ಎ ಸಂಸ್ಥೆಯ ಚರ ಹಾಗೂ ಸ್ಥಿರಾಸ್ತಿಗಳ ಮುಟ್ಟುಗೊಲು ಆದೇಶವನ್ನು ಅಂತಿಮಗೊಳಿಸಿದ ನಂತರ ಇತ್ಯರ್ಥಗೊಳಿಸಲಾಗುವುದು. ನ್ಯಾಯಾಲಯದ ಐ.ಎಂ.ಎ  ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಲಾಗಿದ್ದು ಅಂತಿಮ ಮುಟ್ಟುಗೋಲು ಆದೇಶವನ್ನು ಮುಂದಿನ ಆರು ತಿಂಗಳಿನಲ್ಲಿ ನಿರೀಕ್ಷಿಸಲಾಗಿದ್ದು, ಸಕ್ಷಮ ಪ್ರಾಧಿಕಾರವು ಹರಾಜು ಪ್ರಕ್ರಿಯೆಯನ್ನು ಕೈಗೊಳ್ಳುತ್ತದೆ.  ಐ.ಎಂ.ಎ. ಹಾಗೂ ಅದರ ಅಂಗಸಂಸ್ಥೆಗಳ 475ಕೋಟಿ ರೂಪಾಯಿಗಳ ಸ್ಥಿರ ಹಾಗೂ ಚರಾಸ್ತಿಗಳನ್ನು ಈಗಾಗಲೇ ಕರ್ನಾಟಕ ಸರ್ಕಾರವು ಮುಟ್ಟುಗೋಲು ಮಾಡಿರುತ್ತದೆ. ಈ ವಂಚನೆ ಪ್ರಕರಣದಲ್ಲಿ ಸುಮಾರು 2900 ಕೋಟಿ ರೂಪಾಯಿಗಳು ಹೂಡಿಕೆಯಾಗಿರುವುದಾಗಿ ಅಂದಾಜಿಸಲಾಗಿದ್ದು, ಈ ಪೈಕಿ 1,500 ಕೋಟಿ ರೂಪಯಿಗಳನ್ನು ಈಗಾಗಲೇ ಹೂಡಿಕೆದಾರರು ಪಾವತಿಯ (**Returns**) ರೂಪದಲ್ಲಿ ಸ್ವೀಕರಿಸಿರುವುದಾಗಿ ತಿಳಿಸಿದರು.

## KARNTAKA STATE POLLUTION CONTROL BOARD

## Press Note

Government of Karnataka has issued guidelines to celebrate Deepavalifestival wherein, only Green crackers are permitted for sale and bursting. Stipulated timings for bursting of Green crackers is for 2 hours on festival days from 8.00 PM to 10.00 PM.0

In the Green crackers the harmful chemicals such as Aluminum, Barium, Potassium Nitrate and Free Carbon are eliminated **or**decreased for reducingAir Pollution and noise levels considerably. It is established that

Green Crackers emits30% less of the particulate matter and noise level are below 125 decibels when compare to conventional fire crackers.

The manufacturers of Green crackers are as per the formulation developed by Council of Scientific and Industrial Research- National Environmental & Engineering Research Institute (CSIR-NEERI) and Product approval for new formulation is given by Petroleum and Explosives Safety Organization (PESO). The Green Crackers can be identified through distinct Green logo of CSIR-NEERI & PESO as well as Quick Response coding (QR) system displayed on cartoon boxes.

Any additional information with respect to Green Crackers may be obtained through KSPCB Website **www.kspcb.gov.in**

Public can file a complaint to the District Magistrate Office of concerned district if found / Notice sale of other than Green Crackers.

## ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಈ ಸಾಲಿನ ದೀಪಾವಳಿ ಹಬ್ಬದ ಸಂದರ್ಭದಲ್ಲಿ ರಾಜ್ಯ ಸರ್ಕಾರ ಹಸಿರು ಪಟಾಕಿ ಹೊರತಾಗಿ ಬೇರಾವ ಪಟಾಕಿಯನ್ನು ಮಾರಾಟ ಮಾಡುವುದು ಹಾಗೂ ಸಿಡಿಸುವುದನ್ನು ನಿಷೇಧಿಸಿದೆ. ಪಟಾಕಿಗಳನ್ನು ಹಚ್ಚುವ/ಸಿಡಿಸುವ ಸಮಯ ರಾತ್ರಿ 8.00 ಗಂಟೆಯಿಂದ ರಾತ್ರಿ 10.00 ಗಂಟೆವರೆಗೆ ನಿಗಧಿಪಡಿಸಿದೆ.

ಹಸಿರು ಪಟಾಕಿಗಳಲ್ಲಿ ಸಾಮಾನ್ಯವಾಗಿ ಬಳಕೆ ಮಾಡುವ ರಾಸಾಯನಿಕಗಳಾದ ಆಲ್ಯೂಮಿನಿಯಂ, ಬೇರಿಯಂ, ಪೋಟಾಷಿಯಂ ನೈಟ್ರೇಟ್ ಮತ್ತು ಕಾರ್ಬನ್ ರಹಿತ ಅಥವಾ ಸಾಕಷ್ಟು ಕಡಿಮೆ ಪ್ರಮಾಣದಲ್ಲಿ ಬಳಕೆ ಮಾಡಿದ್ದು, ಬೇರೆ ಪಟಾಕಿಗಳಿಗೆ ಹೋಲಿಸಿದಾಗ ಸುಮಾರು ಶೇ.30% ರಷ್ಟು ಕಡಿಮೆ ಕಣಗಳನ್ನು ಹೊರಹಾಕುತ್ತವೆ ಹಾಗೂ ಶಬ್ಧಮಟ್ಟವೂ ಸಹ 125 ಡೆಸಿಬಲ್‌ಗಿಂತ ಕಡಿಮೆ ಪ್ರಮಾಣದಲ್ಲಿರುತ್ತದೆ.

ಹಸಿರು ಪಟಾಕಿಗಳ ತಯಾರಕರು ತಮ್ಮ ಪಟಾಕಿಗಳ ಕಾರ್ಟೂನ್ ಬಾಕ್ಸ್‌ಗಳ ಮೇಲೆ ರಾಷ್ಟ್ರೀಯ ಪರಿಸರ ಇಂಜಿನಿಯರಿಂಗ್ ಸಂಶೋಧನಾ ಸಂಸ್ಥೆ, ನಾಗಪುರ (CSIR-NEERI)ಹಾಗೂ ಪೆಟ್ರೋಲಿಯಂ ಎಕ್ಸ್‌ಪ್ಲೋಸಿವ್ ಸೇಫ್ಟಿ ಆರ್ಗನೈಸೇಷನ್ (PESO) ರವರಿಂದಅನುಮೋದನೆ ಪಡೆದು ನೋಂದಣಿ,ಪ್ರಮಾಣ ಪತ್ರ ಹಾಗೂ ಲಾಂಛನ ಒಳಗೊಂಡ ಕ್ವಿಕ್ ರೆಸ್ಪಾನ್ಸ್ ಕೋಡ್ (QR Code) ನ್ನುಪ್ರದರ್ಶಿಸಿರುತ್ತಾರೆ.

ಹಸಿರು ಪಟಾಕಿಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನುಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವೆಬ್‌ಸೈಟ್ www.kspcb.gov.inನಲ್ಲಿ ಪಡೆಯುವುದು.

ಸಾರ್ವಜನಿಕರಿಗೆ ಹಸಿರು ಪಟಾಕಿಗಳನ್ನು ಹೊರತುಪಡಿಸಿ ಬೇರೆ ಪಟಾಕಿಗಳನ್ನು ಮಾರಾಟ ಮಾಡುತ್ತಿರುವುದನ್ನು ಕಂಡುಬಂದಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಕಛೇರಿಗೆ ದೂರನ್ನು ನೀಡುವುದು.

| | |
|---|---|
| |  |
| **Green Cracker Emblem** | **Emblem on Green Fire Crackers Box** |

## ಹಸಿರು ಪಟಾಕಿ ಮಾರಾಟಕ್ಕೆ ಕರ್ನಾಟಕ ಉಚ್ಚ ನ್ಯಾಯಾಲಯದ ಷರತ್ತುಬದ್ಧ ಅನುಮತಿ

ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ)

ಹಸಿರು ಪಟಾಕಿ ಮಾರಾಟಕ್ಕೆ ಕರ್ನಾಟಕ ಉಚ್ಚ ನ್ಯಾಯಾಲಯ ಷರತ್ತುಬದ್ದ ಅನುಮತಿ ನೀಡಿದೆ. ಕರ್ನಾಟಕ ರಾಜ್ಯ ಪೊಲೀಸರಿಗೆ ನ್ಯಾಯಾಲಯ ಕಟ್ಟುನಿಟ್ಟಿನ ಆದೇಶ ನೀಡಿದೆ. ಪಟಾಕಿ ಮಾರಾಟ ಮಳಿಗೆಗಳಲ್ಲಿ CSIR ಮತ್ತು NEERI ಧೃಢೀಕರಣ ಹೊಂದಿರುವ ಹಸಿರು ಪಟಾಕಿ ಹೊರತುಪಡಿಸಿ ಬೇರೆ ಯಾವುದೇ ಪಟಾಕಿಗಳು ಮಾರಾಟಮಾಡಕೂಡದು. ಈ ನಿಟ್ಟಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳು ನಿಗಾವಹಿಸಲು ಸೂಚಿಸಿದೆ.

ಅಲ್ಲದೆ, ಹಸಿರು ಪಟಾಕಿ ಬಳಸುವ ಬಗ್ಗೆ ಸಾರ್ವಜನಿಕರಿಗೆ ವ್ಯಾಪಕ ಪ್ರದಾರ ಮಾಡುವ ಮೂಲಕ ಜಾಗೃತಿ ಮೂಡಿಸಲು ಆದೇಶಿಸಿದೆ. ಅಂತೆಯೇ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಶಬ್ದ ಮಾಲಿನ್ಯ ತಡೆಗಟ್ಟಲು ಹಾಗೂ ರಾಜ್ಯ ಪೊಲೀಸರು ಅನಧಿಕೃತ ಪಟಾಕಿಗಳ ಮಾರಾಟ ತಡೆಗಟ್ಟಲು ಕ್ರಮ ಕೈಗೊಳ್ಳಬೇಕು.

ರಾಷ್ಟ್ರೀಯ ಹಸಿರು ಪ್ರಾಧಿಕಾರ ನವೆಂಬರ್ 11 ರಂದು ಸೂಚಿಸಿರುವ ಎಲ್ಲಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದ್ದು ಈ ಕುರಿತು ವಿವರವಾದ ವರದಿ ಸಲ್ಲಿಸಲು ನ್ಯಾಯಾಲಯ ಸರ್ಕಾರಕ್ಕೆ ಆದೇಶಿಸಿದೆ.

## ರಾಜ್ಯಪಾಲರಿಂದ ದೀಪಾವಳಿ ಶುಭಾಷಯ

**ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ)**

**ದೀಪಾವಳಿಯ ಶುಭ ಸಂದರ್ಭದಲ್ಲಿ ಕರ್ನಾಟಕದ ಜನರಿಗೆ ನನ್ನ ಹೃತ್ಪೂರ್ವಕ ಶುಭಾಷಯಗಳನ್ನು ಅರ್ಪಿಸುತ್ತೇನೆ. ಈ ದೀಪಾವಳಿ ಹಬ್ಬವು ಎಲ್ಲ ಸವಾಲುಗಳನ್ನು ಎದುರಿಸಲು ಮತ್ತು ದುಷ್ಟಶಕ್ತಿಗಳನ್ನು ಹತ್ತಿಕ್ಕಲು ಹಾಗೂ ಪ್ರಗತಿ ಮತ್ತು ಯಶಸ್ವಿನ ಹಾದಿಯಲ್ಲಿ ಮುಂದುವರಿಯಲು ನಮಗೆ ಪ್ರೇರಣೆ ನೀಡುತ್ತದೆ ಎಂದು ನಾನು ಭಾವಿಸುತ್ತೇನೆ.**

**ದೀಪಗಳ ಹಬ್ಬವು ನಮ್ಮೆಲ್ಲರನ್ನು ಕತ್ತಲೆಯಿಂದ ಬೆಳಕಿಗೆ ಮತ್ತು ಬಡಡನದಿಂದ ಸಮೃದ್ಧಿಯ ಕಡೆಗೆ ಸಾಗಲು ಪ್ರೇರಣೆ ನೀಡುತ್ತದೆ. ಸಹಾನುಭೂತಿ, ದಯೆ, ಪ್ರೀತಿ ಮತ್ತು ಸದಾಚಾರದ ದೀಪಗಳು ನಮ್ಮ ಮನಸ್ಸಿನಲ್ಲಿ ಮತ್ತು ಹೃದಯಗಳಲ್ಲಿ ಬೆಳಗಲಿ.**

**ಕರ್ನಾಟಕ ರಾಜ್ಯದ ಎಲ್ಲಾ ಜನರಿಗೆ ನನ್ನ ಹೃತ್ಪೂರ್ವಕ ಶುಭಾಶಯಗಳನ್ನು ಹೇಳುವುದು ಜೊತೆಗೆ, ಸಮಾಜದಲ್ಲಿ ಪ್ರತಿಯೊಬ್ಬರು ಮಾಲಿನ್ಯರಹಿತ ಮತ್ತು ಶಬ್ಧಮುಕ್ತ ದೀಪಾವಳಿ ಆಚರಣೆ ಮಾಡಬೇಕು ಎಂದು ಮನವಿ ಮಾಡುತ್ತೇನೆ. ದೀಪಾವಳಿ ಹಬ್ಬವು ಎಲ್ಲರಿಗೂ ಸಂತೋಷವನ್ನು ನೀಡಲಿ ಎಂದು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.**

# ರೈತ ಪರ ಮುಖ್ಯಮಂತ್ರಿಗಳಿಂದ ಕೃಷಿ ಬೆಲೆ ಆಯೋಗದ ಶಿಫಾರಸ್ಸು ವರದಿ ಬಿಡುಗಡೆ

ಕೃಷಿ ಬೆಲೆ ಆಯೋಗವು ಸಿದ್ಧ ಪಡಿಸಿದ**"ಕೃಷಿ ಹಾಗೂ ತೋಟಗಾರಿಕಾ ಬೆಳೆಗಳ ಸಾಗುವಳಿ ವೆಚ್ಚ ಉತ್ಪಾದನೆ ಪ್ರಮಾಣ ಮಾರುಕಟ್ಟೆ ಬೆಲೆಗಳ ವಸ್ತುಸ್ಥಿತಿ ಮತ್ತು ನೂತನ ಮಾರುಕಟ್ಟೆ ಕಾಯ್ದೆಗಳ ವಿಶ್ಲೇಷಣೆ 2019–20**ವರದಿ"ಯನ್ನುಮುಖ್ಯಮಂತ್ರಿಗಳು ಕೃಷ್ಣ ನಿವಾಸದಲ್ಲಿ ಬಿಡುಗಡೆ ಮಾಡಿ, ಆಯೋಗವು ಸಿದ್ಧ ಪಡಿಸಿದ ವರದಿ ಕುರಿತು ಅಭಿನಂದಿಸಿದರು.

ಸದರಿ ಸರಳ ಸಮಾರಂಭದಲ್ಲಿ ಕೃಷಿ ಸಚಿವರಾದ ಶ್ರೀ ಬಿ.ಸಿ.ಪಾಟೀಲ್ ಹಾಗೂ ತೋಟಗಾರಿಕಾ ಸಚಿವರಾದ ಶ್ರೀ ನಾರಾಯಣಗೌಡರುಭಾಗವಹಿಸಿದ್ದರು. ಸರ್ಕಾರದಅಭಿವೃದ್ಧಿಆಯುಕ್ತರು, ಮಾನ್ಯ ಮುಖ್ಯಮಂತ್ರಿಗಳ ಸಲಹೆಗಾರರು ಹಾಗೂ ಕಾರ್ಯದರ್ಶಿಗಳು, ಕೃಷಿ ಇಲಾಖೆಯಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಆಯುಕ್ತರು, ಕೃಷಿ ಮಾರಾಟ ನಿರ್ದೇಶಕರು, ಕೃಷಿ ನಿರ್ದೇಶಕರುಹಾಗೂ ಇತರೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕೃಷಿ ಬೆಲೆ ಆಯೋಗದಅಧ್ಯಕ್ಷರಾದ ಶ್ರೀ ಹನುಮನಗೌಡ ಬೆಳಗುರ್ಕಿ ರವರುಬೆಲೆ ಏರಿಳಿತ ತಪ್ಪಿಸಲು "ಬೆಳೆ ಯೋಜನೆ" ಅನುಸರಿಸುವುದು, ಸಮರ್ಪಕ ನೀರಿನ ನಿರ್ವಹಣೆಗಾಗಿ "ಹೊಲಕ್ಕೊಂದುಕೆರೆ", "ಘೋಷಿತ ಬೆಂಬಲ ಬೆಲೆಯನ್ನುಉಲ್ಲೇಖ ಬೆಲೆಯನ್ನಾಗಿ ಪರಿಗಣಿಸುವುದು", ಪಡಿತರ ವ್ಯವಸ್ಥೆಗೆಅವಶ್ಯಕವಿರುವ ಭತ್ತ, ಜೋಳ, ರಾಗಿ ಬೆಂಬಲ ಬೆಲೆಯಲ್ಲಿ ಖರೀದಿಸಿ ಪಡಿತರ ವ್ಯವಸ್ಥೆಯಲ್ಲಿ ವಿತರಿಸುವಕುರಿತುಆಯೋಗವು ಸಿದ್ಧ ಪಡಿಸಿದ "ಮುಖ್ಯಮಂತ್ರಿಗಳ ಅನ್ನಪೂರ್ಣಯೋಜನೆ" ಜಾರಿಗೆತರುವುದು, ಬೆಂಬಲ ಬೆಲೆ ಖರೀದಿಯನ್ನು ಸಂಚಾರಿಖರೀದಿ ವ್ಯವಸ್ಥೆಮುಖೇನ ನಿರ್ವಹಿಸುವುದು. NDDF ಮಾರ್ಗಸೂಚಿಯನ್ವಯ ನೈಸರ್ಗಿಕ ವಿಕೋಪಗಳಿಗೆ ನೀಡಲಾಗುತ್ತಿರುವ ಪರಿಹಾರಧನ ಹೆಚ್ಚಿಸುವುದು. ಬೆಳೆ ಗಂಡಾಂತರ ಪರಿಹರಿಸಲು ಬೆಳೆ ವಿಮೆ ರಾಜ್ಯದಎಲ್ಲಾರೈತರಿಗೂವಿಸ್ತರಿಸುವುದು, ಬೆಂಬಲ ಬೆಲೆಯಲ್ಲಿಕೇಂದ್ರದNAFED ಸಂಸ್ಥೆಯು ಹಣ ಬಿಡುಗಡೆ ಮಾಡಲುಅನುಸರಿಸುತ್ತಿರುವ ಪದ್ಧತಿಯನ್ನೇFCI ಸಂಸ್ಥೆಗೂ ಅನುಸರಿಸುವಂತೆಕೇಂದ್ರಕ್ಕೆ ಶಿಫಾರಸ್ಸು ಮಾಡುವುದು, ಕೇಂದ್ರವು ಬೆಂಬಲ ಬೆಲೆ ನಿಗದಿಪಡಿಸುವಲ್ಲಿ$C_2$ ಬೆಲೆ ಪರಿಗಣಿಸುವಂತೆ ಶಿಫಾರಸ್ಸು ಮಾಡುವುದು, ಬೆಲೆ ಗಂಡಾಂತರತಪ್ಪಿಸಲು ಬೆಲೆ ವಿಮೆ ಜಾರಿಗೆತರಲುಕೇಂದ್ರದ ಶಿಫಾರಸ್ಸು ಮಾಡುವುದು, NDDF / KMFಮಾದರಿಯಲ್ಲಿಕರ್ನಾಟಕತೋಟಗಾರಿಕಾ ಮಹಾ ಮಂಡಳ ಸ್ಥಾಪಿಸುವುದು, ಬೆಂಬಲ ಬೆಲೆ ಯೋಜನೆಯ ಅನುಷ್ಠಾನದಲ್ಲಿರಾಜ್ಯದಕೇಂದ್ರ ಸರ್ಕಾರ ವಿಧಿಸುವರಾಜ್ಯದ ಪ್ರಮಾಣ ನಿರ್ಬಂಧ ಹಾಗೂ ರೈತ ಪ್ರಮಾಣ ನಿರ್ಬಂಧತೆಗೆದು ಹಾಕುವುದು ಹಾಗೂ ಆವರ್ತ ನಿಧಿ ಮೊತ್ತವನ್ನುಐದು ಸಾವಿರ ಕೋಟಿಗಳಿಗೆ ಹೆಚ್ಚಿಸುವಕುರಿತುಸಲ್ಲಿಸಲಾದ ವರದಿಯಲ್ಲಿ ಶಿಫಾರಸ್ಸು ಮಾಡಿರುವುದಾಗಿಸಭೆಯ ಗಮನಕ್ಕೆ ತಂದರು. ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿ ಹಾಜರಿದ್ದಇಲಾಖಾ ಮುಖ್ಯಸ್ಥರಿಗೆ ಹಾಗೂ ಅಧಿಕಾರಿಗಳಿಗೆ ಈ ಕುರಿತಂತೆಕ್ರಮಜರುಗಿಸಲು ಸೂಚಿಸಿದರು. ಸದರಿ ಸಮಾರಂಭದಲ್ಲಿಆಯೋಗವು ಸಿದ್ದಪಡಿಸಿದ

**“ಮುಖ್ಯಮಂತ್ರಿಅನ್ನಪೂರ್ಣಯೋಜನೆ ವರದಿ”, “ಪ್ರಧಾನ ಮಂತ್ರಿ ಫಸಲ್ ಬಿಮಾಯೋಜನಾ ವರದಿ”** ಹಾಗೂ **“ರೈತರಆತ್ಮಹತ್ಯೆ–ರೈತ ಮಹಿಳೆಯರ ಸಂತ್ರಸ್ತತೆ – ಬವಣೆಗಳು ಮತ್ತು ಪರಿಹಾರಿಗಳ ವರದಿ”**ಗಳನ್ನು ಬಿಡುಗಡೆ ಮಾಡಿದರು.

## Release of the Report of Karnataka Agriculture Price Commission by Hon’ble Chief Minister of Karnataka

Karnataka Agriculture Price Commission have prepared a report titled “Cost of Cultivation of Agricultural and Horticultural Crops, quantity of production, present status of market prices and analysis of the recent Market Acts – 2019-2020”. Hon’ble Chief Minister released this report at his official residence “Krishna” at 11.00 AM on 13.11.2020. Sri B.C.Patil, Hon’ble Minister for Agriculture and Sri Narayana Gowda, Hon’ble Minister for Horticulture graced the occasion. The other participants in this simple function were Consultant and Secretary for Hon’ble Chief Minister, Additional Chief Secretary to the Government (Agriculture), Commissioner for Agriculture, Director, Marketing Department, Director of Agriculture and other Senior Officers.

Sri Hanumana Gowda Belagurki, Chairman, Karnataka Agriculture Price Commission, briefed the important points of the report to the gathering. It is as follows: (1) Adoption of “Cropping Plan”, to avoid fluctuation in market prices, (2) having a tank for each field to manage water efficiently, (3) To Consider declared Minimum Support Price has Reference Price to sell the produce at farm gate, (4) To implement a new project formulated by Agriculture Price Commission (Mukhya Mantri AnnapoornaYojana) in order to distribute Rice, Jowar and Ragi through Public Distribution System (PDS) by purchasing these penalties, farmers at Minimum Support Price,(5) To Manage the purchase of these commodities at Minimum Support Price through Mobile Purchase Centers, (6) To enhance the relief amount provided for natural calamities under the guidelines of NDDF to the affected farmers,(7) To cover all the farmers in the State under PMFBY to protect them from Price Risks, (8) To make recommendations for the Government of India to instruct Food Corporation of India (FCI) to follow the same procedure as that of NAFED in procurement of commodities with Minimum Support Price (9) To make recommendation to the Government of India to consider cultivation charge $C_2$ instead of $A_1$+FL while declaring Minimum Support Price (MSP) to the major agricultural crops (10) To establish Karnataka Horticulture Federation on the lines of NDDF / KMF, (11) To increase the revolving fund managed by Marketing Federation to Five Thousand Crores in the interest of farmers.

Hon’ble Chief Minister appreciated the efforts of Price Commission and instructed the officers present to take necessary action in this regard. Along with this report, 3 more reports viz., (1) “**Mukhya Mantri AnnapoornaYojana**”, (2) A Commentary of recommendations to improve “**Pradhana Mantri FasalBimaYojana (PMFBY)**”&

(3)"**Farmers Suicide – the Grievances of Affected Farm Women - the hardships and relief measures**".

## ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪ್ರವಾಸ

**ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ) :**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಅವರು ನವೆಂಬರ್ 13 ರಂದು ಚಾಮರಾಜನಗರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಶೋಕ ಸಂದೇಶ

**ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ) :**

ವಿಜಯವಾಣಿ ಅಂಕಣಗಾರರಾಗಿ ಹಾಗೂ ತಮ್ಮದೇ ಆದ ಪತ್ರಿಕೆ "ಹಾಯ್ ಬೆಂಗಳೂರ್" ಸಂಪಾದಕರಾಗಿ ಬಹಳ ವರ್ಷಗಳಿಂದ ಯಶಸ್ವಿಯಾಗಿ ನಡೆಸಿ ಪತ್ರಿಕಾರಂಗದಲ್ಲಿ ತಮ್ಮದೇ ಆದ ಛಾಪುವನ್ನು ದಾಖಲಿಸಿದ್ದ ರವಿಬೆಳಗೆರೆ ಇವರ ಅಗಲಿಕೆಯನ್ನು ಕೇಳಿ ನನ್ನ ಮನಸ್ಸಿಗೆ ದು : ಖವಾಗಿದೆ ಎಂದು ಕರ್ನಾಟಕ ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ನೇರ, ದಿಟ್ಟ ಹಾಗೂ ನಿರಂತರ ನುಡಿಗಳಿಂದ ಕನ್ನಡದ ಪತ್ರಿಕೋದ್ಯಮಕ್ಕೆ ತಮ್ಮದೇ ಆದ ಹೊಳಪು ಆಯಾಮವನ್ನು ನೀಡಿ, ಸಮಾಜದ ವಿಷಯಗಳನ್ನು ಪರಿಪೂರ್ಣವಾಗಿ ಎತ್ತಿ ಹಿಡಿದು, ಮನದಟ್ಟು ಮಾಡುವ ಚಾಣಕ್ಯತೆ ಅವರ ಬರಹದಲ್ಲಿ ಕಂಡುಬಂದಿತ್ತು.

ಶ್ರೀಯುತರ ಆತ್ಮಕ್ಕೆ ಭಗವಂತನು ಸದ್ಗತಿಯನ್ನು ಕರುಣಿಸಲಿ ಹಾಗೂ ಅವರ ಕುಟುಂಬದವರಿಗೆ ಈ ಅಗಲಿಕೆಯ ದು:ಖವನ್ನು ಭರಿಸುವ ಶಕ್ತಿಯನ್ನು ನೀಡಲೆಂದು ಸಭಾಧ್ಯಕ್ಷರು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

## ಶೋಕ ಸಂದೇಶ

ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ) :

ಹಿರಿಯ ಪತ್ರಕರ್ತ, ಬರಹಗಾರ ರವಿಬೆಳಗೆರೆ ಅವರು ಇಂದು ನಿಧನರಾದ ಸುದ್ಧಿ ತಿಳಿದು ಅತ್ಯಂತ ನೋವಾಗಿದ್ದು, ಅವರ ನಿಧನಕ್ಕೆ ವಸತಿ ಸಚಿವ ವಿ. ಸೋಮಣ್ಣ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಕರ್ನಾಟಕದ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಕಳೆದ ಎರಡೂವರೆ ದಶಕಗಳಿಂದ ಪತ್ರಕರ್ತರಾಗಿ ಮೇಧಾವಿ ಬರಹಗಾರರಾಗಿ ಹಾಗೂ ನಿರೂಪಕರಾಗಿ ಜನಪ್ರಿಯತೆ ಗಳಿಸಿದ್ದರು.

ನಿರ್ಭಿಡೆ ವ್ಯಕ್ತಿತ್ವ ಹೊಂದಿದ ಮೇಧಾವಿ ಬರಹಗಾರರು, ಖ್ಯಾತ ಲೇಖಕರು ಹಾಗೂ ಹಿರಿಯ ಪತ್ರಕರ್ತರಾಗಿದ್ದ ಇವರ ನಿಧನದಿಂದ ಕನ್ನಡ ಮಾಧ್ಯಮ ಹಾಗೂ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವುಂಟಾಗಿದ್ದು ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಈ ದು : ಖ ವನ್ನು ಭರಿಸುವ ಶಕ್ತಿಯನ್ನು ಭಗವಂತನು ಇವರ ಕುಟುಂಬ ವರ್ಗಕ್ಕೆ, ಹಿತೈಷಿಗಳಿಗೆ ಮತ್ತು ಅಪಾರ ಅಭಿಮಾನಿ ಬಳಗಕ್ಕೆ ನೀಡಲು ಎಂದು ಪ್ರಾರ್ಥಿಸಿದ್ದಾರೆ.

**ಛಾಯಾಚಿತ್ರ ಶೀರ್ಷಿಕೆ )**

ವಿಧಾನಸೌಧದಲ್ಲಿ ಇಂದು ನಡೆದ ಕರ್ನಾಟಕ ವಿಧಾನಸಭೆಯ ೨೦೨೦_೨೧ನೇ ಸಾಲಿನ ಸರ್ಕಾರಿ ಭರವಸೆಗಳ ಸಮಿತಿಯ ಪ್ರಾರಂಭಿಕ ಸಭೆಯಲ್ಲಿ ಅಧ್ಯಕ್ಷರಾದ ರಘುಪತಿ ಭಟ್ ಸಮಿತಿಯ ಕಾರ್ಯ ಚಟುವಟಿಕೆ ಕುರಿತು ಸದಸ್ಯರೊಂದಿಗೆ ಚರ್ಚಿಸಿದರು.

## ರಫ್ತು ನಿರ್ವಹಣಾ ತರಬೇತಿ

ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ) :

ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರವು ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾಗಿದ್ದು ರಾಜ್ಯದ ರಫ್ತು ಉತ್ತೇಜನಾ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ಈ ಕೇಂದ್ರವು ರಾಜ್ಯದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ 5 ದಿನಗಳ 105 ನೇ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮವನ್ನು ದಿನಾಂಕ 17-11-2020 ರಿಂದ 21-11-2020 ರವರೆಗೆ ಆನ್‌ಲೈನ್ ಪ್ಲಾಟ್‌ಫಾರ್ಮ್‌ನಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ. ರಾಜ್ಯದ ಕೈಗಾರಿಕೋದ್ಯಮಿಗಳಿಗೆ ಮತ್ತು ಭಾವಿ ರಫ್ತುದಾರರನ್ನು ರಫ್ತು ಕ್ಷೇತ್ರಕ್ಕೆ ಪ್ರವೇಶಿಸಲು ಪ್ರೋತ್ಸಾಹಿಸುವ ಮೂಲಕ ರಾಜ್ಯದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ ದೃಷ್ಠಿಯಿಂದ ಈ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ರಫ್ತು ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಪ್ರಮುಖವಾದ ಅಂಶಗಳ ಬಗ್ಗೆ ಮಾಹಿತಿಯನ್ನು ನೀಡಲಾಗುವುದು. ರಫ್ತು ವ್ಯಾಪರವನ್ನು

ಪ್ರಾರಂಭಿಸಲು ಆಸಕ್ತಿಯುಳ್ಳ ಕೈಗಾರಿಕೆಗಳು/ಭಾವಿ ರಫ್ತುದಾರರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿಟಿಪಿಸಿ ಕಛೇರಿಯಲ್ಲಿ ನೋಂದಣಿಯನ್ನು ಮಾಡಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಸಿ.ಎಸ್. ಭಾಸ್ಕರ್ ವಿ.ಟಿ.ಪಿ.ಸಿ. ಬೆಂಗಳೂರು (ಮೊ 9880958218) ಇ ಮೇಲ್ **vtpckarnataka@gmail.com, www.vtpc.karnataka.gov.in** ಇವರನ್ನು ಸಂಪಕಿಸಲು ಪ್ರಕಟಣೆ ತಿಳಿಸಿದೆ.

## I M A Scam – Claim filing through Online

Bangaluru, November 13 (Karnataka Information) :

The Claims can be submitted online by the Depositors of IMA either any of the Bengaluru one / Karnataka One / Aatalji Jan Snehi Kendra Centres with the help of the operator or anywhere through online on their own said Shri Harshaguptha, Special Officer and Competent Authority of IMA Scam Cases.

Today he addressed Media persons at Varthabhavan Meeting hall and said, the claims can be filed for a period of 1 month from 25-11-2020 ro 24-12-2020 beyond which no claim applications are acceptable. Claim filing in online application is 2 stage process. In 1st stage claimants provide personal details like mobile number, bank account number etc., in 2nd stage, they provide scheme wise deposit details.

The depositors can file claim using Aadhaar or UTR number for Rs. 1/- transfer from their bank account to this Competent Authority bank account. Account Number 6442116442, IFSC code: HDFC0001748. Further, if their IMA declared Bank account is operational, then they need not submit any documents regarding scheme enrollment like Bond Certificates, Share Certificates etc. Else, they have to upload these documents.

If the deposit details provided by applicants tally with IMA maintained database, then they need not provide any receipts for deposits. Else, they need to upload deposit receipts. If there are any uploaded documents, the

applicants need to get these e - attested through heir jurisdictional Tahsildar within another 60 days beyond last date i.e., from 24-12-2020 to 24-02-2021.

Those who file claims using Aadhaar OTP or UTR number for Rs. 1/- transfer from non IMA declared Bank Account will be required to do additional authentication to be eligible for receiving claim amount, either through Aadhaar biometric of send Rs. 1/- from IMA declared bank account within 60days of last date. Beyond 60 days, they will have to authenticate themselves with alternate documents like DL, EPIC etc before Competent Authority. All collected details like mobile number, bank account number, PAN, Aadhaar number, client ID, deposit details are validated in real time with corresponding database.

Name and photo match are being done through software for faster processing. Name is matched between IMA records, Aadhaar and Bank remitter data. Photo is matched from Aadhaar, IMA records and live captured photo. If depositer is dead or hospitalized, claim application can be filed by nominee or legal heir supported with necessary documents like death / hospitalization legal heir certificate. Hospitalization cases will be cleared for 2nd stage of claim filing only after online approval by competent autority within 48 hours.

Depositors are being informed in advance about claim commencement date so that they can be prepared. Apart from media and public notice in newspapers, they are being individually informed through SMS, pre recorded calls and post. They can contact for more details through call centre (from Morning 8 AM to Night 8 PM) 080-46885959; website – imaclaims.karnataka.gov.in; email-splocaima20@gmail.com or whatsapp number 7975568880

Claims will be settled after the interim attached properties are confirmed by Hon;ble Special Court, Bangaluru. For speedy trial, an exclusive court for IMA in set up. It is expected that judgment for confirmation and subsequent auction may happen in next 6 months.

Property worth Rs. 475 crores is attached by Government of Karnataka. The claims amount approximately is about Rs. 2900 crores and about Rs. 1500

crores is estimated to get adjusted towards returns already received by depositors.

Jawaharlal Nehru Planetarium (JNP), Bengaluru, has resumed its regular activities for public **from 12th November 2020**. The JNP is following the Standard Operating Procedure prescribed by the Government to control the Novel corona virus. Shows on two different subjects are offered during the day.

A new programme entitled **TO WORLDS BEYOND : Journey through the Solar System** is added to the show schedule which was inaugurated by Dr. E. V. Ramana Reddy, IAS, Additional Chief Secretary, Dept of Electronics, IT, BT & S&T, Govt. of Karnataka.

*Planetarium will be commencing the 'Weekend classes for Pre University Students' on the topic **Rigid Body Dynamics** from **November 29, 2020**.*

## DETAILS OF SANITIZATION ARRANGEMENTS MADE FOR PUBLIC:

Arrangements have been made in the campus as per Standard Operating Procedure:

- Thermal screening of public
- Hand washing facility units are created at the entrance near the Ticket Booth and near the exit door of the Sky-theatre
- Floor markings are made to guide public to maintain physical distance
- Online ticket booking and digital payment using UPI for counter booking in place
- Hand Sanitizers are placed at several places in the building
- Alternative seats are only allotted in the Sky-theatre to maintain physical distance. This has reduced our seating capacity to 110 per show.
- Sanitization of the Sky-theatre after each show with sprayer/fogging machine

In addition to the above requirement as per SOP, following additional arrangements have been made:

- Foot operated valves and auto flushing sensors for non contact use of toilets.
- Special arrangements made for sanitising the building and Sky-theatre by fogging of the area.
- Ultra Violet Germicidal Irradiation unit is being installed in the AC plant for creating sterilized environment in the sky theatre and exhibition hall.

All the above arrangements are made using the donation given by M/s. Kewaunee Labway India Pvt. Ltd, Bengaluru through Rotary Lakeside, Bengaluru

**The Jawaharlal Nehru Planetarium is offering Shows at the following times commencing from 12th November 2020:**

“To Worlds Beyond: Journey though solar system” in Kannada at 10:30 am and English at 12:30 pm

“Celestial Fireworks” in Kannada at 2:30 pm and English at 4:30 pm

A **premium show** will be arranged against advance booking at 6:30 pm. This is an exclusive show and the visitors will have a choice of shows amongst the following five shows and also a choice of language between Kannada and English.

- To Worlds Beyond: Journey though solar system
- Celestial Fireworks
- Dawn of the Space Age
- Exploring the Universe
- Our Solar System

**Revision of Entry Fee :**

The Entry fee is revised after a gap of 3 years; the new rates are Rs.75/- per adult, Rs.50/- per Child (below the age of 16 years) and Rs.40/- per head for organized group of school students.

**Science Park:**

The JNP has a Science Park with over 50 exhibits. Arrangements are made to see the demonstration of working of these Science Models using Augmented Reality app called FlippAR. Visitors can download the ‘app’ and scan the QR code on the board placed next to the object to see the demonstration. This arrangement will help in learning about these Science Models maintaining physical distance which ensures safety.

## ಅನ್ಯಗ್ರಹಗಳ ಅನ್ವೇಷಣೆ : ಸೌರವ್ಯೂಹದಲ್ಲಿ ಪಯಣ

**ಸಾರಾಂಶ**: ಅನ್ಯಗ್ರಹದ ಅನ್ವೇಷಣೆ ಒಂದು ಅದ್ಭುತ ಯಾನ. ಅಪ್ರತಿಮ ಸೌಂದರ್ಯದ ರೋಮಾಂಚಕಾರಿ ಅನುಭವ ನೀಡುವ ಈ ಮೂವತ್ತು ನಿಮಿಷಗಳು, ಅತ್ಯಂತ ಸ್ಪಷ್ಟವಾದ 4ಕೆ ರೆಸಲ್ಯೂಶನ್ ಚಿತ್ರಗಳಿಂದ ರೂಪುಗೊಂಡಿವೆ.

ಸೂರ್ಯನ ಮತ್ತು ಸೌರಮಂಡಲದ ಇತರ ಕಾಯಗಳ ವರ್ಣವೈವಿಧ್ಯವನ್ನು, ಹೈ ರೆಸಲ್ಯೂಶನ್‌ನ ಚಿತ್ರಗಳು ಅತ್ಯಂತ ಆನಂದವನ್ನು, ಮರೆಯಲಾಗದ ಅನುಭವವನ್ನೂ ನೀಡುತ್ತವೆ.

ಅಮೋಘ ತೇಜೋ ರಾಶಿಯಿಂದ ಕೂಡಿದ ಸೂರ್ಯ ತನ್ನ ಒಡಲಾಳದ ಸುಂದರ ಸತ್ಯವನ್ನು ಬಿಚ್ಚಿಡುತ್ತಾ, ಮೇಲ್ಮೈಯಲ್ಲಿರುವ ಸೌರಕಲೆಗಳು ಮತ್ತು ಸೌರ ಜ್ವಾಲೆಗಳನ್ನು ಪ್ರದರ್ಶಿಸುತ್ತದೆ. ಚಂದ್ರನ ಅಂಗಳದಿಂದ ಭೂಮಿಯ ಆ ನೋಟ ನಮ್ಮನ್ನೂ ಕಲ್ಪನಾ ಲೋಕಕ್ಕೆ ಕರೆದೊಯ್ಯುತ್ತದೆ.

ಬುಧ ಗ್ರಹದ ಬಂಡೆಗಲ್ಲುಗಳು, ಪ್ರಖರ ಶುಕ್ರನ ದಟ್ಟವಾದ ಮೋಡಗಳು, ಮಂಗಳನ ಮೇಲಿನ ಸುರುಳಿ ಗಾಳಿಗಳು, ಕಂದಕಗಳು, ದೈತ್ಯ ಪರ್ವತ "ಒಲಂಪಸ್"ನ ಭವ್ಯ ನೋಟ ಬೆರಗುಗೊಳಿಸುತ್ತವೆ. ಉರುಳು ಬಂಡೆಗಳಂತೆ ಕಾಣುವ ಅಸ್ಟ್ರಾಯ್ಡ್‌ಗಳು, ಅನಿಲ ದೈತ್ಯ ಗುರುಗ್ರಹ ಮತ್ತು ಅದರ ಮೇಲ್ಮೈನ ವರ್ಣರಂಜಿತ ಪಟ್ಟಿಗಳು ಮನೋಹರವಾಗಿ ಚಿತ್ರಿತವಾಗಿವೆ. ಸೌರಮಂಡಲದ ಅತ್ಯಂತ ಆಕರ್ಷಣೆಯ ಕಾಯ "ಶನಿ", ತನ್ನ ಉಂಗುರಗಳ ರಚನೆಯನ್ನು, ಅದರ ಸೊಬಗನ್ನು ತೆರೆದಿಡುತ್ತಾ ಈ ಸೌರಯಾನಕ್ಕೆ ಸಾರ್ಥಕತೆಯನ್ನು ತಂದುಕೊಡುತ್ತದೆ.

ಇತರ ಅನಿಲ ದೈತ್ಯಗಳಾದ ಯುರೇನಸ್ ಮತ್ತು ನೆಪ್ಚೂನ್ ತಮ್ಮ ಉಪಗ್ರಹಗಳೊಡನೆ ಕಾಣಿಸಿ ತಮ್ಮ ರಹಸ್ಯಮಯ ದಿವ್ಯ ಲೋಕಕ್ಕೆ ಕರೆದೊಯ್ಯುತ್ತದೆ. ಅನಿಲಗಳಿಂದ ಕೂಡಿದ ಧೂಮಕೇತುಗಳು ಮತ್ತು ಇತರ ಕ್ಷುದ್ರಗ್ರಹಗಳು ಅತ್ಯಂತ ಮನೋಹರವಾಗಿ ಚಿತ್ರಿತವಾಗಿದೆ.

ನಮ್ಮ ಸೌರಮಂಡಲದ ಭೌತಿಕ ಸೌಂದರ್ಯವನ್ನು ತೆರೆದಿಡುವಲ್ಲಿ ಈ ಪ್ರದರ್ಶನ ಯಶಸ್ವಿಯೆನಿಸುವುದರಲ್ಲಿ ಯಾವುದೇ ಸಂಶಯವಿಲ್ಲ ಎಂಬ ವಿನಮ್ರ ನಂಬಿಕೆ.

## To Worlds Beyond : Journey through the Solar System

**Synopsis:** This 30 minute 4K resolution full dome, sky theatre show takes you on a voyage to other planets and our Solar System.

Cliffs on Mercury, dazzling Venus with its thick clouds, Swirling dust storms, valleys, the gigantic mount Olympus on Mars are breath taking. The beauty of tumbling asteroids, giant Jupiter and its colourful stripes are surely impressing. The journey through the rings of Saturn reveals the structure and mesmerises with the details.

Gas giants Uranus and Neptune along with their respective moons take you to a wonderland; the dwarf planets and dusty comet are explained with effective animations.

The Sun in all its brilliance shows up its interior, surface features like sunspots and solar flares. The Moon with its beautiful landscapes will make you dream of looking at earth from its horizon.

Stunning high resolution images of the Sun and other objects brings out unimaginable joy and unforgettable experience.

The show will provide an immersive experience taking you through a great voyage across the Solar System.

Bannerghatta Biological Park (BBP) is home to 24 Asian Elephants,

Bengaluru, 13 (Karnataka Information):

Bannerghatta Biological Park (BBP) is home to 24 Asian Elephants, mainly captive born but some rescued from temples. Sunder, a 20 year old elephant, was rescued from a temple in Kolhapur, Maharashtra.

It’s our privilege to have Sunder as part of our Bannerghatta Biological Park family. He is truly a gentle giant who loves the company of other elephants as well as his keepers. He has gradually habituated to his life here in Bannerghatta and we will continue to give him all the care and love. Special thanks to all his well wishers from all over the world and PETA for bringing light into Sunder's life as well as for their continuous support and love..

## ಕನ್ನಡ ಕಟ್ಟುವಿಕೆಯಲ್ಲಿ ಎಲ್ಲರ ಪಾತ್ರ ಮುಖ್ಯ: ಟಿ.ಎಸ್.ನಾಗಾಭರಣ

### ವಿಧಾನಸೌಧದಲ್ಲಿಂದು ಪ್ರಾಧಿಕಾರದ ಸದಸ್ಯರ ಸಭೆ ನಡೆಸಿದ ಅಧ್ಯಕ್ಷರು

**ಬೆಂಗಳೂರು:** ಕನ್ನಡ ಭಾಷೆ, ಸಂಸ್ಕೃತಿ ಮತ್ತು ಇತಿಹಾಸಕ್ಕೆ ಸಂಬಂಧಿಸಿದಂತೆ ಪ್ರಚುರ ಪಡಿಸುವ ಮತ್ತು ಕನ್ನಡ ಭಾಷಾ ಪ್ರೌಢಿಮೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬ ಕನ್ನಡಿಗನ ಪಾತ್ರ ಮಹತ್ವದ್ದಾಗಿದೆ ಎಂದು **ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಟಿ.ಎಸ್.ನಾಗಾಭರಣ** ಅವರು ಹೇಳಿದರು.

ಕನ್ನಡ ಕಾಯಕ ವರ್ಷಾಚರಣೆಯಲ್ಲಿ ಕನ್ನಡ ಕಟ್ಟುವ ಕಾಯಕದಲ್ಲಿ ನಾಡಿನ ಪ್ರತಿಯೊಬ್ಬರನ್ನು ಒಳಗೊಳ್ಳುವ ನಿಟ್ಟಿನಲ್ಲಿ ಕಾರ್ಯಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು. ಜತೆಗೆ ಪ್ರಾಧಿಕಾರದ ಅಷ್ಟ ಕಾರ್ಯಸೂಚಿಗಳ ಅಡಿಯಲ್ಲಿ ಎಲ್ಲರೂ ಕಾರ್ಯನಿರ್ವಹಿಸುವುದು ಬಹುಮುಖ್ಯವಾಗಿದೆ ಎಂದರು.

ಕನ್ನಡ ಕಾಯಕ ವರ್ಷಾಚರಣೆ ಹಿನ್ನೆಲೆಯಲ್ಲಿ ಹಮ್ಮಿಕೊಳ್ಳಬೇಕಾಗಿರುವ ಕಾರ್ಯಚಟುವಟಿಕೆಗಳ ಕುರಿತು ಪ್ರಾಧಿಕಾರ ಸದಸ್ಯರೊಂದಿಗೆ ವಿಧಾನಸೌಧದಲ್ಲಿಂದು ಸಭೆ ನಡೆಸಿದ ಅಧ್ಯಕ್ಷರು, ಎಲ್ಲ ಸದಸ್ಯರು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಯಾವ ರೀತಿ ಕೆಲಸ ಕಾರ್ಯಗಳನ್ನು ನಡೆಸಬೇಕು ಎಂಬುದರ ಬಗ್ಗೆ ಮಾಹಿತಿ ನೀಡಿದರು.

ಕನ್ನಡ ಕಾಯಕಕ್ಕಾಗಿ ಈಗಾಗಲೇ ಕನ್ನಡ ಕಾಯಕ ಪಡೆಯನ್ನು ಮಾಡಲಾಗಿದೆ. ಅಲ್ಲದೆ ಕನ್ನಡ ಕೆಲಸ ಮಾಡುವ ಆಸಕ್ತ ಪ್ರತಿಯೊಬ್ಬರೂ ಇದರಲ್ಲಿ ಪಾಲ್ಗೊಳ್ಳಬಹುದು. ಆದರೆ ಯಾವುದೇ ಕಾರಣಕ್ಕೂ ವ್ಯಾಪ್ತಿ ಮೀರಬಾರದು ಮತ್ತು ಪ್ರಾಧಿಕಾರಕ್ಕೆ ಚ್ಯುತಿ ಬಾರದಂತೆ ಎಚ್ಚರವಹಿಸುವುಂತೆ ಸಲಹೆ ನೀಡಿದರು.

ಸಂತಾಪ: ಇದೇ ಸಂದರ್ಭದಲ್ಲಿ ನಿಧನರಾದ ನಾಡಿನ ಇಬ್ಬರು ದೈತ್ಯ ಪ್ರತಿಭೆಗಳಾದ ಧಾರವಾಡದ ಕವಿ ವಿ.ಸಿ.ಐರಸಂಗ ಮತ್ತು ಖ್ಯಾತ ಪತ್ರಕರ್ತ ರವಿ ಬೆಳಗೆರೆ ಅವರುಗಳ ನಿಧನಕ್ಕೆ ಒಂದು ನಿಮಿಷ ಮೌನಾಚರಣೆ ನಡೆಸಿ ಸಂತಾಪ ವ್ಯಕ್ತಪಡಿಸಲಾಯಿತು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಪ್ರೊ.ಅಬ್ದುಲ್ ರೆಹಮಾನ್ ಪಾಷಾ, ರೋಹಿತ್ ಚಕ್ರತೀರ್ಥ, ಡಾ.ರಮೇಶ್ ಗುಬ್ಬಿಗೂಡು, ಸುರೇಶ್ ಬಡಿಗೇರ, ಕಬ್ಬಿನಾಲೆ ವಸಂತ ಭಾರದ್ವಾಜ, ಡಾ.ವಿಜಯಲಕ್ಷ್ಮಿ ಬಾಳೆಕುಂದ್ರಿ, ಡಾ.ಸಿ.ಎ.ಕಿಶೋರ್, ಪ್ರಾಧಿಕಾರದ ಕಾರ್ಯದರ್ಶಿ ಡಾ.ಕೆ.ಮುರಳಿಧರ, ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಡಾ.ವೀರಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

## Students to travel in BMTC ordinary services

Bengaluru, 13 (Karnataka Information): Allowing Degree/ Post graduation/ Diploma/ Technical/ Medical Students to travel in BMTC ordinary services from 17-11-2020

As per the state government guidelines, the Degree/ Post graduation/ Diploma/ Technical/ Medical colleges are starting their academic activities from 17-11-2020.

To facilitate students for their academic activities, BMTC has decided to allow Degree/ Post graduate/ Diploma/ Technical/ Medical students to travel from their residence to their colleges in its ordinary services from 17-11-2020 by producing the last year issued student pass (student pass issued in 2019-20) or current year college fee paid receipt or college ID.

The guidelines and schedule of pass issuance will be given separately.

**ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ) : ನವೆಂಬರ್ 17** ರಿಂದ ಪದವಿ/ ಸ್ನಾತಕೋತರ/ ಡಿಪ್ಲೊಮೊ/ ತಾಂತ್ರಿಕ/ ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳಿಗೆ ಸಂಸ್ಥೆಯ ಸಾಮಾನ್ಯ ಸೇವೆಗಳಲ್ಲಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.

ರಾಜ್ಯ ಸರ್ಕಾರದ ನಿರ್ದೇಶನದಂತೆ ಪದವಿ/ ಸ್ನಾತಕೋತರ/ ಡಿಪ್ಲೊಮಾ/ ತಾಂತ್ರಿಕ/ ವೈದ್ಯಕೀಯ ಕಾಲೇಜುಗಳು ದಿನಾಂಕ 17-11-2020 ರಿಂದ 2020-21ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲಾಗುತ್ತಿದೆ.

ಈ ಹಿನ್ನಲೆಯಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಅನುವಾಗುವಂತೆ **ಪದವಿ/ ಸ್ನಾತಕೋತರ/ ಡಿಪ್ಲೊಮಾ/ ತಾಂತ್ರಿಕ/ ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳು 2019-20ನೇ ಸಾಲಿನಲ್ಲಿ ವಿತರಣೆ ಮಾಡಿರುವ ಸ್ಮಾರ್ಟ್‌ಕಾರ್ಡ್ ವಿದ್ಯಾರ್ಥಿ ಪಾಸು ಅಥವಾ ಪ್ರಸ್ತುತ ಸಾಲಿನಲ್ಲಿ ಕಾಲೇಜಿಗೆ**

**ದಾಖಲಾಗಿರುವ ಶುಲ್ಕ ರಸೀದಿ ಅಥವಾ ಗುರುತಿನ ಚೀಟಿಯೊಂದಿಗೆ ದಿನಾಂಕ 17-11-2020 ರಿಂದ ಸಂಸ್ಥೆಯ ಸಾಮಾನ್ಯ ಸೇವೆಗಳಲ್ಲಿ ವಿದ್ಯಾರ್ಥಿಗಳು ವಾಸಸ್ಥಳದಿಂದ ಕಾಲೇಜಿನವರೆಗೆ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.**

ಪ್ರಸಕ್ತ ಸಾಲಿನ ವಿದ್ಯಾರ್ಥಿ ಪಾಸನ್ನು ಪಡೆಯುವ ಬಗ್ಗೆ ಪ್ರತ್ಯೇಕವಾಗಿ ಮಾಹಿತಿ ನೀಡಲಾಗುವುದು.